# ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ

– ರಶ್ಮಿ ದೇವಾಪುರ

ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ವಿಭಾಗ,

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ,

ಕಲಬುರಗಿ

ಪ್ರೀತಿ ಮತ್ತು ಕ್ರೌರ್ಯ ಈ ಎರಡೂ ಅಂಶಗಳು ಪ್ರಾಚೀನ ಕನ್ನಡ ಸಾಹಿತ್ಯದ ಪ್ರಮುಖ ಅಂಗಗಳಾಗಿ ಕಂಡುಬರುತ್ತವೆ. ಮನುಷ್ಯ ಪ್ರೀತಿಯಿಲ್ಲದೆಯೂ ಬದುಕಲಾರ. ಅದರಂತೆಯೇ ಕ್ರೌರ್ಯವಿಲ್ಲದೆಯೂ ಬದುಕಿದ ಉದಾಹರಣೆಗಳಿಲ್ಲ. ಅಂದರೆ ಪ್ರೀತಿ ಮತ್ತು ಕ್ರೌರ್ಯಗಳು ಮನುಷ್ಯನ ಬದುಕಿನ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಬ್ಬನೇ ವ್ಯಕ್ತಿಯಲ್ಲಿ ಸುಪ್ತವಾಗಿ ಅಡಗಿರುವ ಪ್ರೀತಿ ಮತ್ತು ಕ್ರೌರ್ಯ ಇವೆರಡೂ ಅವನ ಜೀವನದಲ್ಲಿ ಸಂದರ್ಭಕ್ಕೆ ತಕ್ಕಂತೆ ಹೊರಗೆ ಪ್ರಕಟಗೊಳ್ಳುತ್ತ ಹೋಗುತ್ತವೆ.

ಕ್ಷಾತ್ರಯುಗ ಎಂದೇ ಹೆಸರಾದ ಕನ್ನಡ ಸಾಹಿತ್ಯದಲ್ಲಿ ಪ್ರೀತಿಗಿಂತ ಕ್ರೌರ್ಯವೇ ಹೆಚ್ಚಾಗಿ ಕಂಡುಬಂದಿದೆ. ಈ ಕ್ರೌರ್ಯವೇ ಹಿಂಸೆಗೆ ಮೂಲ ಕಾರಣ. ಹಿಂಸೆಯ ಮೂಲ ಈ ಕ್ರೌರ್ಯದಲ್ಲಿ ಅಡಗಿದ್ದರೂ ನಡೆದಿರುವ ಹಿಂಸೆಗಳಿಗೆ ಕ್ರೌರ್ಯ ಮಾತ್ರವೇ ಕಾರಣವಲ್ಲ ಎಂಬುದನ್ನೂ ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಕ್ರೌರ್ಯವಿಲ್ಲದೆಯೂ ಇತರ ಹಲವಾರು ವೈಯಕ್ತಿಕ, ಸಾಮಾಜಿಕ ಮತ್ತು ಧಾರ್ಮಿಕ ಕಾರಣಗಳಿಗೆ ಹಿಂಸೆಗಳು ನಡೆದಿರುವುದನ್ನು ಪ್ರಾಚೀನ ಸಾಹಿತ್ಯದುದ್ದಕ್ಕೂ ಕಾಣುತ್ತೇವೆ.

ಅಹಿಂಸೆಯೇ ಶ್ರೇಷ್ಠವಾದ ಧರ್ಮವೆಂದು ಭಾವಿಸಿದ ಜೈನಧರ್ಮವು ಅಹಿಂಸೆಯ ಪ್ರತಿಪಾದನೆಗಾಗಿ ಹಿಂಸೆಯನ್ನು ಪೂರಕವಾಗಿ ಬಳಸಿಕೊಂಡಿರುವುದು ಗಮನಾರ್ಹ. ಜೈನಧರ್ಮವು ಹಿಂಸೆಯ ಪರಿಮಾಣ ಮತ್ತು ಪರಿಣಾಮ ಈ ಎರಡನ್ನು ತಿಳಿಸಿಕೊಡುವ ಮೂಲಕ ಮನುಷ್ಯನನ್ನು ಹಿಂಸೆಯಿಂದ ಅಹಿಂಸೆಯ ಕಡೆಗೆ ಕೊಂಡೊಯ್ಯುವ ಪ್ರಯತ್ನವನ್ನು ಮಾಡಿತು. ಇದೇ ಆ ಧರ್ಮದ ಪ್ರಧಾನ ಆಶಯವೂ ಕೂಡ. ಅದರ ಆಶಯಗಳೇನೇ ಇದ್ದರೂ ಜೈನ ಸಾಹಿತ್ಯದುದ್ದಕ್ಕೂ ಒಂದಲ್ಲ ಒಂದು ಸಂದರ್ಭದಲ್ಲಿ ಹಿಂಸೆ ಬಳಕೆಯಾಗಿರುವುದನ್ನು ಕಾಣಬಹುದು. ಆದ್ದರಿಂದ ಜೈನಯುಗ ಎಂದು ಕರೆಯಲ್ಪಡುವ ಪ್ರಾಚೀನ ಸಾಹಿತ್ಯದಲ್ಲಿ ಕಂಡುಬರುವ ಹಿಂಸೆಯ ಸ್ವರೂಪ ಹಾಗೂ ಭಿನ್ನ ಬಗೆಗಳಲ್ಲಿ ಕಂಡುಬರುತ್ತದೆ.

ಇಂಗ್ಲಿಷ್‌ನ Persecution ಎಂಬ ಪದದ ಕನ್ನಡ ಸಂವಾದಿ ಪದವೇ ಹಿಂಸೆ. 'ಹಿಂಸೆ' ಎಂಬ ಪದಕ್ಕೆ 'ಹಾನಿ', 'ಕೇಡು', 'ತೊಂದರೆ', 'ಕಾಟ', 'ಪೀಡನೆ', 'ಉಪದ್ರವ' ಎಂಬ ಅರ್ಥಗಳಿವೆ. ಈ ಎಲ್ಲ ಶಬ್ದಗಳೂ ಮನಸ್ಸು ಮತ್ತು ದೇಹವನ್ನು ಘಾಸಿಗೊಳಿಸುವ ಅರ್ಥವನ್ನೇ ಸೂಚಿಸುತ್ತವೆ. ಯಾವುದೇ ವ್ಯಕ್ತಿ ತನ್ನ ಸ್ವಾರ್ಥ ಸಾಧನೆಗಾಗಿ, ಸ್ವ–ಸಂತೋಷಕ್ಕಾಗಿ, ಧಾರ್ಮಿಕ ಕಾರಣಗಳಿಗಾಗಿ ಅಥವಾ ಮೌಢ್ಯ ಸಂಪ್ರದಾಯಗಳ ಆಚರಣೆಗಾಗಿ ಮನುಷ್ಯ ಇಲ್ಲವೆ ಪ್ರಾಣಿಗಳ ಮೇಲೆ ಎಸಗುವ ಹಲ್ಲೆ ಅಥವಾ ದುರಾಕ್ರಮಣವನ್ನು ಹಿಂಸೆ ಎನ್ನುತ್ತೇವೆ. ಅಲ್ಲದೆ ಯಾರಿಂದಲಾದರೂ ಆದ ಅವಮಾನ, ಅನ್ಯಾಯ ಅಥವಾ ಅಪರಾಧಕ್ಕೆ ನೊಂದ ಅಥವಾ ಕೋಪಗೊಂಡ ವ್ಯಕ್ತಿಯು ಪ್ರತಿಯಾಗಿ ತೊಂದರೆ ಕೊಟ್ಟವರಿಗೆ ಕೆಡುಕನ್ನು ಉಂಟುಮಾಡುವುದು ಕೂಡ ಹಿಂಸೆಯೇ ಆಗುತ್ತದೆ. ಕಾರಣ ಯಾವುದೇ ಇರಲಿ ಮತ್ತೊಬ್ಬರಿಗೆ ಕೆಡುಕನ್ನು ಉಂಟು ಮಾಡುವ ವ್ಯಕ್ತಿಯನ್ನು 'ಹಿಂಸಕ' ಅಥವಾ 'ಘಾತುಕ' ಎಂದು ಕರೆದರೆ, ಹಿಂಸಿಸುವ ಮತ್ತು ಪೀಡಿಸುವ ಕ್ರಿಯೆಯನ್ನು 'ಹಿಂಸ್ರ' ಎಂಬ ಪದದಿಂದ ಕರೆಯಲಾಗುತ್ತದೆ.

ಹಿಂಸೆಯು ಪ್ರಾಚೀನ ಸಾಹಿತ್ಯದಲ್ಲಿ ಹಲವಾರು ಭಿನ್ನ ಸ್ವರೂಪಗಳಲ್ಲಿ ಕಂಡುಬರುವುದು ವಿಶೇಷ. ಹಿಂಸೆಗೆ ಇಂಥದ್ದೇ ರೂಪವಿದೆಯೆಂದು ಖಚಿತವಾಗಿ ಹೇಳಲು ಬರುವುದಿಲ್ಲ. ಏಕೆಂದರೆ ಹಿಂಸೆಗಳು ಆಯಾ ಕಾರಣ ಮತ್ತು ಸಂದರ್ಭವನ್ನು ಆಧರಿಸಿ ಬೇರೆ ಬೇರೆ ಸ್ವರೂಪವನ್ನು ಪಡೆದುಕೊಳ್ಳುತ್ತ ಹೋಗುತ್ತವೆ.

ಅಸಹಾಯಕತೆ, ಕ್ರೌರ್ಯ, ಬಲ, ಅಧಿಕಾರ, ಧರ್ಮ, ಪ್ರತಿಜ್ಞೆ, ಆಕ್ರೋಶ, ಸಿಟ್ಟು ಮುಂತಾದವು ಹಿಂಸೆಯನ್ನು ಬೇರೆ ಬೇರೆ ನೆಲೆಯಲ್ಲಿ ಮಾಡಿಸುತ್ತವೆ. ಹಾಗಾಗಿ ಹಿಂಸೆಯ ಸ್ವರೂಪ ಏಕರೂಪಿಯಾಗಿರದೆ ಬಹರೂಪಿಯಾಗಿ ಕಂಡುಬರುತ್ತದೆ.

ಕನ್ನಡದ ಮೊಟ್ಟ ಮೊದಲ ಗದ್ಯಕೃತಿಯಾದ ವಡ್ಡಾರಾಧನೆಯಲ್ಲಿನ ಎಲ್ಲ ಕತೆಗಳಲ್ಲೂ ಹಿಂಸಾ ಪ್ರಕ್ರಿಯೆಗಳು ನಡೆದಿರುವುದಕ್ಕೆ ನಿದರ್ಶನಗಳಿವೆ. ಆ ಹಿಂಸಾ ಪ್ರಕ್ರಿಯೆಗಳು ಕೇವಲ ಭೂಲೋಕದಲ್ಲಿ ಮಾತ್ರವಲ್ಲದೆ ನರಕದಲ್ಲಿಯೂ ನಡೆದಿದೆ ಎಂಬುದು ವಿಶೇಷ. ಹಿಂಸೆ ಎಲ್ಲಿಯೇ ನಡೆಯಲಿ ನಡೆದ ಎಲ್ಲ ಹಿಂಸೆಗಳು ಸ್ವರೂಪದಲ್ಲಿ ಮಾತ್ರ ಭಿನ್ನವಾಗಿವೆ.

ಸುಕುಮಾರಸ್ವಾಮಿಯ ಕತೆಯಲ್ಲಿ ವಾಯುಭೂತಿಯು ತನ್ನ ಅಹಂಕಾರದಿಂದ ತನಗೆ ಬುದ್ಧಿವಾದ ಹೇಳಲು ಬಂದ ಅತ್ತಿಗೆಯ ತಲೆಯನ್ನು ಕಾಲಿನಿಂದ ಒದೆಯುವ ಹಿಂಸೆಯಿದ್ದರೆ, ಅದೇ ಕತೆಯಲ್ಲಿ ಗಂಭೀರೆ ಎಂಬ ಮುದುಕಿಯು ಮನೆಗೆ ಕನ್ನ ಹಾಕಲು ಬಂದ ಕಳ್ಳರ ಮೇಲೆ ಬಿಸಿನೀರನ್ನು ಸುರಿದು ಶಿಕ್ಷಿಸಿ, ಹಿಂಸಿಸುವ ಸ್ವರೂಪ ಕಾಣಿಸುತ್ತದೆ. ಅದರಂತೆಯೇ ಅದೇ ಮುದುಕಿಯು ಮತ್ತೊಂದು ಸಂದರ್ಭದಲ್ಲಿ ಹೆದರಿಕೆಯಿಂದ ಮರವನ್ನು ಹತ್ತಿಕುಳಿತಿದ್ದಾಗ ಅದೇ ಮರವನ್ನು ಏರಿದ ಕಳ್ಳನು ಕೋರಿದ ಮದುವೆಯಾಗುವ ಆಸೆಯನ್ನು ಈಡೇರಿಸುವುದಕ್ಕಾಗಿ ನಾಲಗೆಯಿಂದ ಮಾಂಸದ ತುಣುಕನ್ನು ತನ್ನ ಬಾಯಿಗೆ ಇಡುವಂತೆ ಹೇಳುತ್ತಾಳೆ. ಕಳ್ಳನು, '..ಪಿಶಿತದ ಖಂಡಮಂ ಬಾಯೊಳಿಡೆ' ಮುದುಕಿಯು ಮೋಸದಿಂದ 'ನಾಲಿಗೆಯಂ ಪರಿಯೆ ಕಚ್ಚಿ..' ಕಳ್ಳನ ನಾಲಗೆಯನ್ನು ತುಂಡರಿಸುವ ಮತ್ತೊಂದು ಸ್ವರೂಪದ ಕ್ರೂರ ಹಿಂಸೆಯನ್ನು ಕಾಣಬಹುದು.

ಸುಕೌಶಳಸ್ವಾಮಿಯ ಕತೆಯಲ್ಲಿ '..ಪುಲಿಬಂದು ಪಾಯ್ದು ಬಸಿರಂ ಪೋೞ್ದು ನೆತ್ತರಂ ಕುಡಿದು ತೆಗಲೆಯಂ ಪೋೞ್ದು ತಿನ್ಬಾಗಳ್...' ಎಂಬ ಮಾತಿನಲ್ಲಿ ಹೊಟ್ಟೆಯನ್ನು ಸೀಳುವ, ರಕ್ತವನ್ನು ಕುಡಿಯುವ ಹಾಗೂ ಎದೆಯನ್ನು ಬಗೆದು ಮಾಂಸವನ್ನು ತಿನ್ನುವ ರಾಕ್ಷಸೀ ಪ್ರವೃತ್ತಿಯ ಹಿಂಸೆ ಇರುವುದನ್ನು ಕಾಣಬಹುದು. ಅದೇ ರೀತಿ ಭದ್ರಬಾಹು ಭಟಾರರ ಕತೆಯಲ್ಲಿ '..ಸಾಯೆಬಡಿದು' ಎಂಬ ಮಾತಿನಲ್ಲಿ ಜೀವ ಹೋಗುವ ಹಾಗೆ ಹೊಡೆಯುವ ಹಿಂಸೆಯಿದ್ದರೆ, ಇದೇ ಕತೆಯಲ್ಲಿ ರಾಜನೊಬ್ಬ ಬರೆದ ಪತ್ರದ ವಿಚಾರವನ್ನು ತಪ್ಪಾಗಿ ಗ್ರಹಿಸಿ ಕುಣಾಳ ಎಂಬ ಕುಮಾರನ 'ಕಣ್ಗಳುಮನೊಡೆದು ಕುರುಡಂ ಮಾಡಿದ' ಎಂಬ ಕ್ರಿಯೆಯಲ್ಲಿ ಕಣ್ಣುಗಳನ್ನು ಕೀಳುವ ಹಿಂಸೆಯಿರುವುದನ್ನು ಕಾಣುತ್ತೇವೆ. ಹಾಗೆಯೇ ಚಿಲಾತ ಪುತ್ರನ ಕತೆಯಲ್ಲಿ 'ವ್ಯಂತರ ದೇವತೆಯೊಂದು ಹಿಂದಿನ ಜನ್ಮದ ದ್ವೇಷದಿಂದ ಹದ್ದಾಗಿ ಬಂದು ತಲೆಯನ್ನು ಕುಕ್ಕಿ ನೆತ್ತಿಯ ಮೇಲಿನ ಕಣ್ಣುಗಳನ್ನು ತಿನ್ನುವುದನ್ನು ಕಾಣಬಹುದು. ಅಂದರೆ ಇಲ್ಲಿ ಮನುಷ್ಯನಿಗೆ ಯಾವ ಅಂಗಗಳು ಪ್ರಧಾನವಾಗಿ ಬೇಕಾಗಿರುತ್ತವೋ ಅಂಥವನ್ನು ನಾಶಗೊಳಿಸುವ ಮತ್ತು ಅಂತಹ ಹಿಂಸೆಗಳನ್ನು ಮಾಡಿ ಧೀರ್ಘಕಾಲ ನೋವಿಗೆ ಒಳಗು ಮಾಡುವ ಅಂಶಗಳಾಗಿ ಕಾಣಿಸುತ್ತವೆ.

ರನ್ನನ 'ಗದಾಯುದ್ಧ'ದಲ್ಲಿ ಕೂಡ ಹಿಂಸೆಗಳು ಭಿನ್ನ ಸ್ವರೂಪದಲ್ಲಿ ಕಂಡುಬರುತ್ತವೆ. ಕೆಲವೊಂದು ಕಡೆ ಅಮಾನವೀಯತೆಯಿಂದ ಕೂಡಿದ ಹಿಂಸೆಯಿದ್ದರೆ ಮತ್ತೊಂದು ಕಡೆ ರಾಕ್ಷಸೀ ಪ್ರವೃತ್ತಿಯ ಹಿಂಸೆಯಿರುವುದೂ ಗೋಚರಿಸುತ್ತದೆ. ಅಷ್ಟೇ ಅಲ್ಲದೆ ಸ್ವ-ತಪ್ಪಿನಿಂದ ತನ್ನನ್ನು ತಾನೇ ಹಳಿದುಕೊಂಡು ಹಿಂಸೆಗೆ ಒಳಪಡಿಸಿಕೊಳ್ಳುವ ಅಂಶಗಳು ಕಂಡುಬರುತ್ತವೆ. ಅಂತೆಯೇ ಕ್ಷತ್ರಿಯ ಧರ್ಮ ವಿರುದ್ಧವಾದ ಹಿಂಸೆಗಳೂ ಕಾಣಿಸುತ್ತವೆ. ಒಟ್ಟಾರೆಯಾಗಿ ಗದಾಯುದ್ಧದಲ್ಲಿ ಕಾಣಿಸುವ ಹಿಂಸಾ ಪ್ರಕ್ರಿಯೆಗಳು ಕೆಲವು ಅನಿವಾರ್ಯ ಸಂದರ್ಭದಲ್ಲಿ ಮಾಡಬೇಕಾದರೆ ಮತ್ತೆ ಕೆಲವು ಅಮಾನುಷವಾಗಿ ಮಾಡಿದ ಕ್ರಿಯೆಗಳಾಗಿ ಕಂಡುಬರುತ್ತವೆ.

ಗದಾಯುದ್ಧದಲ್ಲಿ ಭೀಮಸೇನನ ಪ್ರತಿಜ್ಞೆ ಮತ್ತು ಅವನ ಪರಾಕ್ರಮವನ್ನು ತಿಳಿಸುವ ಸಂದರ್ಭದಲ್ಲಿ ರನ್ನನು ಚಿತ್ರಿಸುವ,

> '...ದುಶ್ಶಾಸನ ರಕ್ತರಕ್ತವದನಂ, ದುರ್ಯೋಧನೋರುಕ್ಷಮಾಧರವಜ್ರಂ...' ಎಂಬಲ್ಲಿ,
> 'ಖಳದುಶ್ಶಾಸನ ಕೃಷ್ಣಲೋಹಿತ ಜಲಾಶ್ಲಿಷ್ಟಂ.. ಸುಯೋಧನನೋರು ಮಕುಟೋದ್ಘಟ್ಟ..'
> ಎಂಬಲ್ಲಿ,

'ದುಶ್ಶಾಸನೋರಸ್ಥಳೋಚ್ಚಲದುಷ್ಣಾಂಬುನಿಮಗ್ನಪೂರ್ಣಂ..' ಎಂಬಲ್ಲಿ,

'ಕುರುಕುಲ ಶೋಣಿತ ಪಾದ ಪದ್ಮತಳಂ..'

ಈ ಎಲ್ಲ ಮಾತುಗಳಲ್ಲಿ ಭೀಮನು ಈಗಾಗಲೇ ಮಾಡಿರುವ ಮತ್ತು ಮಾಡಲಿರುವ ಹಿಂಸಾತ್ಮಕ ಅಂಶಗಳು ವ್ಯಕ್ತವಾಗಿವೆ. ಜೊತೆಗೆ ಎದೆಯನ್ನು ಸೀಳಿ ರಕ್ತ ಕುಡಿಯುವ ಪ್ರಕ್ರಿಯೆ ಮನುಷ್ಯರು ಮಾಡುವ ಕೆಲಸವಾಗಿ ಕಾಣಿಸುವುದಿಲ್ಲ. ಹಾಗಾಗಿ ಈ ಹಿಂಸೆಯಲ್ಲಿ ರಾಕ್ಷಸೀ ಗುಣವಿರುವುದು ಎದ್ದು ಕಾಣುತ್ತದೆ.

ಜನ್ನನ 'ಯಶೋಧರ ಚರಿತೆ'ಯಲ್ಲೂ ಕೂಡ ಹಿಂಸೆಗಳ ಪ್ರಸ್ತಾಪವಿರುವುದೇ ಅಲ್ಲದೆ ಅಲ್ಲಿನ ಪ್ರತಿಯೊಂದು ಹಿಂಸೆಯೂ ಭಿನ್ನವಾದ ಸ್ವರೂಪವನ್ನು ಪಡೆದಿರುವುದನ್ನು ಕಾಣಬಹುದು. ಈ ಕಾವ್ಯದಲ್ಲಿ ಹಿಂಸೆ ಮತ್ತು ಅಹಿಂಸೆಗಳು ಒಟ್ಟೊಟ್ಟಿಗೆ ಪ್ರತಿಪಾದನೆಯಾಗುತ್ತ ಕಡೆಗೆ ಹಿಂಸೆಯಿಂದ ಅಹಿಂಸೆಯತ್ತ ಕೊಂಡೊಯ್ಯುವ ಪ್ರಯತ್ನ ನಡೆದಿದೆ.

ಯಶೋಧರ ಚರಿತೆಯ ಪಾತ್ರಗಳು ಪ್ರಾರಂಭವಾಗುವುದೇ ಹಿಂಸೆಯನ್ನು ಪ್ರಸ್ತಾಪಿಸುವ ಮೂಲಕ. ಅಲ್ಲಿ ಕಂಡುಬರುವ ಚಂಡಮಾರಿ, ಮಾರಿದತ್ತ, ಚಂಡಕರ್ಮ ಇವರ ಹಿಂಸಾ ಪ್ರವೃತ್ತಿಯನ್ನು ವೈಭವೀಕರಿಸುವ ನೆಲೆಯಲ್ಲಿ ಚಿತ್ರಿತವಾಗಿವೆ. ಮಾರಿಗುಡಿಯ ವರ್ಣನೆಯ ಸಂದರ್ಭದಲ್ಲಿ ಚಂಡಮಾರಿಯನ್ನು ಜನ್ನನು 'ಪಾಪ ಕಳಾಪಂಡಿತೆ' ಎಂದು ಕರೆದು, ಈ ದೇವಿಯು ಸದಾ ಬಲಿಯನ್ನು ಕೇಳುವ, ಕೊಡದಿದ್ದರೆ ವಿನಾಶವನ್ನು ದಯೆಗೈಯುವವಳಾಗಿ ಕಾಣಿಸುತ್ತಾಳೆ. ಇವಳಿಗೆ ಬೆಂಕಿಗೆ ತುಪ್ಪ ಸುರಿಯುವಂತೆ ಮಾರಿದತ್ತ ಮತ್ತು ಚಂಡಕರ್ಮ ಕಾಣಿಸುತ್ತಾರೆ.

ದೇವಿಗೆ ಬಲಿ ಕೊಡುವ ಸಂದರ್ಭದಲ್ಲಿ ಬಲಿಗಾಗಿ ಎಳೆದು ತಂದ ಪ್ರಾಣಿ ಮೇಲೆ ಆಗುತ್ತಿದ್ದ ಹಿಂಸೆಯು ತುಂಬ ಕ್ರೂರ ರೀತಿಯಲ್ಲಿ ಇದ್ದುದನ್ನು ಕಾಣಬಹುದು. ಕೈಗಳನ್ನು ಕತ್ತರಿಸುವ, ಕಣ್ಣನ್ನು ಕೀಳುವ, ಕರುಳುಗಳನ್ನು ತೋರಣದಂತೆ ಕಟ್ಟುವ, ಕಾಲ್ಗಳನ್ನು ತಿರುಗಿಸಿ ನೆತ್ತರಿನ ಅಡುಗೆಯನ್ನು ಮಾಡುವ, ನಾಲಗೆಯನ್ನು ಹೊರಗೆ ಕಿತ್ತು ನೆತ್ತಿಯ ಮೂಲಕ ಗಾಳವನ್ನು ಚುಚ್ಚುವ ಲಕ್ಷ ಲೆಕ್ಕದ ಹಿಂಸಾವಾದಿಗಳು ಕಂಡುಬರುತ್ತಾರೆ. ಇವೆಲ್ಲವೂ ಹಿಂಸೆಯ ಬೇರೆ ಬೇರೆ ಮುಖಗಳಾಗಿ ಕಾಣಿಸುತ್ತವೆ. ಈ ಎಲ್ಲ ಹಿಂಸೆಗಳು ಕೇವಲ ಪ್ರಾಣಿಗಳ ಮೇಲೆ ಮಾತ್ರವಾಗಿರದೆ ನರ ಹಿಂಸೆಯೂ ನಡೆಯುತ್ತಿತ್ತು ಎಂಬುದನ್ನು,

'ದೆಸೆದೆಸೆಗೆ ನರಶಿರಂ
ತೆತ್ತಿಸಿ ಮೆರೆದವು...'

ಎಂಬ ಮಾತುಗಳಿಂದ ಅರಿತುಕೊಳ್ಳಬಹುದು. ಇವೆಲ್ಲವೂ ದೇವಿಯ ಹೆಸರಿನಲ್ಲಿ ನಡೆಯುವ ಹಿಂಸೆಗಳಾಗಿ ಕಂಡುಬಂದರೆ ಕೆಲವೊಮ್ಮೆ ಬೇಟೆಯ ನೆಪದಲ್ಲಿ ಪ್ರಾಣಿಗಳನ್ನು ಕೊಲ್ಲುವ ಹಿಂಸೆಗಳೂ ಕಂಡುಬರುತ್ತವೆ. ಆ ಸಂದರ್ಭದಲ್ಲಿ ಭವಾವಳಿಯಲ್ಲಿದ್ದ ಯಶೋಧರನು ತಾನು ನೊಂದುಕೊಳ್ಳುವ ಮೂಲಕ ಹಿಂಸೆಯನ್ನು ಅನುಭವಿಸುತ್ತಾನೆ.

ಇಂತಹ ಹಿಂಸೆಗಳನ್ನು ಮಾನಸಿಕ ಹಿಂಸೆ, ದೈಹಿಕ ಹಿಂಸೆ, ಪ್ರಾಣಿ ಹಿಂಸೆ, ಸಂಕಲ್ಪ ಹಿಂಸೆ, ಸೇಡು ಅಥವಾ ಪ್ರತೀಕಾರದ ಹಿಂಸೆ, ಪ್ರತಿಜ್ಞಾ ಹಿಂಸೆ, ಅಧಿಕಾರದ ಹಿಂಸೆ, ಯುದ್ಧ ಹಿಂಸೆ... ಮುಂತಾಗಿ ವಿಂಗಡಿಸಬಹುದು.

ಇಷ್ಟವಾಗದ ಮಾತು ಮತ್ತು ಇಷ್ಟವಾಗದ ಕ್ರಿಯೆಗಳಿಂದ ಆಗುವ ಹಿಂಸೆಯನ್ನು ಮಾನಸಿಕ ಹಿಂಸೆ ಎನ್ನಬಹುದು. ಅಂದರೆ ಮನಸ್ಸನ್ನು ಘಾಸಿಗೊಳಿಸುವ ವ್ಯಂಗ್ಯದ ಮಾತುಗಳಿಂದಾಗಲೀ ಅಥವಾ ತಮಗೆ ಇಷ್ಟವಿಲ್ಲದ ಸಾಮಾಜಿಕ ನಿಷಿದ್ಧ ಕೆಲಸಗಳಿಂದಾಗಲೀ ಆಗುವ ಹಿಂಸೆಯನ್ನು ಮಾನಸಿಕ ಹಿಂಸೆಯೆಂದು ಕರೆಯಬಹುದು. ಜನ್ನನ ಯಶೋಧರ ಚರಿತೆಯಲ್ಲಿ ಅಮೃತಮತಿಯು ಪರಪುರುಷನ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡು ತನ್ನ ಗಂಡನಿಗೆ ನೀಡಿದ ಮಾನಸಿಕ ಹಿಂಸೆಯನ್ನು ನೋಡಬಹುದು. ಅದೇ ರೀತಿ ಯಶೋಧರನು ಕೂಡ ಅಮೃತಮತಿ ಮಾಡಿದ ಕೆಲಸಕ್ಕೆ ಪ್ರತೀಕಾರವೆಂಬಂತೆ ವ್ಯಂಗ್ಯದಿಂದ 'ನೊಂದಳೆತ್ತಿರೆ ಸುಕುಮಾರಿಯನ್' ಎಂದು ಅಣಕದ ರೀತಿಯಲ್ಲಿ ಮಾತಾಡಿದ್ದು ಅಮೃತಮತಿಗೆ ಮಾಡಿದ ಮಾನಸಿಕ

ಹಿಂಸೆಯಾಗಿಯೇ ಕಾಣಿಸುತ್ತದೆ. ಇಂತಹ ಹಿಂಸೆಗಳು ದೇಹಕ್ಕೆ ಯಾವ ಹಾನಿಯನ್ನು ಮಾಡದಿದ್ದರೂ ಮನಸ್ಸಿಗೆ ತುಂಬ ನೋವನ್ನು ತಂದುಕೊಡುವುದಾಗಿರುತ್ತವೆ.

ವೈಯಕ್ತಿಕ ದ್ವೇಷಕ್ಕಾಗಿಯೋ, ಸ್ವಾರ್ಥ ಸಾಧನೆಗಾಗಿಯೋ ಅಥವಾ ಮತ್ತಿನ್ನಾವುದೇ ಕಾರಣಗಳಿಗಾಗಿ ಮತ್ತೊಬ್ಬ ವ್ಯಕ್ತಿಯ ಮೇಲೆ ಶಾರೀರಿಕ ಹಲ್ಲೆ ನಡೆಸುವುದು ದೈಹಿಕ ಹಿಂಸೆಯಾಗುತ್ತದೆ. ಇದರಲ್ಲಿ ಕತ್ತಿಯಿಂದ ಇರಿಯುವ, ಕೈಕಾಲು ಕತ್ತರಿಸುವ, ಕೊಲೆ ಮಾಡುವ, ಕಣ್ಣುಗಳನ್ನು ಕೀಳುವ, ಕರುಳುಗಳನ್ನು ಬಗೆಯುವ, ಗರಗಸದಿಂದ ಕೊಯ್ಯುವ, ಮೂಗನ್ನು ಕತ್ತರಿಸುವ, ಕಲ್ಲಿನಿಂದ ಹೊಡೆಯುವ, ಚಾವಟಿಯಿಂದ ಬಾರಿಸುವ... ಇಂತಹ ಯಾವುದೇ ಕ್ರಿಯೆಗಳು ದೈಹಿಕ ಹಿಂಸೆಗಳಾಗಿ ಕಾಣಿಸುತ್ತವೆ. ಇವೆಲ್ಲ ಹಿಂಸೆಗಳು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಮಗೆ ಹೇರಳವಾಗಿ ದೊರೆಯುತ್ತವೆ. ಉದಾಹರಣೆಗೆ ವಡ್ಡಾರಾಧನೆ ಕೃತಿಯ ವಿದ್ಯುಚ್ಚೋರನೆಂಬ ರಿಸಿಯ ಕತೆಯಲ್ಲಿ ನರಕದ ವರ್ಣನೆಯನ್ನು ಗಮನಿಸಿದರೆ ಮತ್ತು ಯಶೋಧರ ಚರಿತೆಯ ಚಂಡಮಾರಿಯ ದೇವಾಲಯದಲ್ಲಿ ಕೊಡುವ ಬಲಿಗಳ ವರ್ಣನೆಯನ್ನು ಗಮನಿಸಿದರೆ ದೈಹಿಕ ಹಿಂಸೆಗಳ ಅರಿವು ನಮಗಾಗುತ್ತದೆ.

ಹಿಂಸೆಯನ್ನು ಪ್ರಾಯೋಗಿಕವಾಗಿ ನಾವು ಮಾಡದೇ ಹೋದರೂ ಹಿಂಸೆ ಮಾಡಬೇಕೆಂಬ ಆಲೋಚನೆ ಮನಸ್ಸಿನಲ್ಲಿ ಮೂಡಿದರೂ ಸಹ ಅದೊಂದು ಹಿಂಸೆಯೇ. ಅದನ್ನು 'ಸಂಕಲ್ಪ ಹಿಂಸೆ' ಎಂದು ಕರೆಯುತ್ತಾರೆ. ಅಷ್ಟೇ ಅಲ್ಲದೆ ಉದ್ದೇಶಪೂರ್ವಕವಾಗಿ ಹಿಂಸೆಯನ್ನು ಮಾಡುವುದೂ ಕೂಡ ಸಂಕಲ್ಪ ಹಿಂಸೆಯೇ ಆಗುತ್ತದೆ. ಯಶೋಧರ ಚರಿತೆಯಲ್ಲಿ ಯಶೋಧರನು ತನ್ನ ತಾಯಿಯ ಒತ್ತಾಯಕ್ಕೆ ಮಣಿದು ಹಿಟ್ಟಿನ ಕೋಳಿಯನ್ನು ಬಲಿಕೊಡುವುದಕ್ಕೆ ಸಂಕಲ್ಪ ಮಾಡಿದ್ದನ್ನು ನೋಡಬಹುದು.

ಯಾವುದೇ ಒಬ್ಬ ವ್ಯಕ್ತಿಗೆ ಮತ್ತೊಬ್ಬನಿಂದ ಅನ್ಯಾಯ ಅಥವಾ ತೊಂದರೆ ಆಗಿದ್ದಾಗ ಆಗಿರುವ ಅನ್ಯಾಯಕ್ಕೆ ಪ್ರತಿಯಾಗಿ ದ್ವೇಷದಿಂದ ತೊಂದರೆ ಕೊಟ್ಟವನಿಗೆ ಕೊಡುವ ಶಿಕ್ಷೆಯು ಸೇಡಿನ ಹಿಂಸೆಯಾಗಿ ಕಾಣಿಸುತ್ತದೆ. ದ್ವೇಷದಿಂದ ಹಿಂಸೆ ಮಾಡಲು ಬಯಸುವವನು ಈಗಾಗಲೇ ಮತ್ತೊಬ್ಬನಿಂದ ಯಾವುದೋ ಒಂದು ಬಗೆಯ ಹಿಂಸೆಗೆ ಒಳಗಾಗಿರುತ್ತಾನೆ. ಅದಕ್ಕೆ ಪ್ರತಿಯಾಗಿ ತಾನೂ ಕೆಡುಕನ್ನು ಮಾಡಬೇಕೆಂದು ಬಗೆದು ಕೊಡುವ ಹಿಂಸೆಯು ಸೇಡಿನ ಪ್ರತೀಕಾರವನ್ನು ಸೂಚಿಸುತ್ತದೆ. ಉದಾಹರಣೆಗೆ ಗಜಕುಮಾರನ ಕತೆಯಲ್ಲಿ ಬರುವ ಪಂಗುಳನೆಂಬ ವ್ಯಾಪಾರಿಯು ತನ್ನ ಹೆಂಡತಿಯನ್ನು ತನ್ನಿಂದ ದೂರಮಾಡಿ ತಾನು ಅನೈತಿಕವಾಗಿ ಬಳಸಿಕೊಳ್ಳುತ್ತಿದ್ದ ಗಜಕುಮಾರನ ದೇಹವನ್ನು ಸೇಡಿನಿಂದ ಇರಿದು ಕೊಲ್ಲುವುದು ಪ್ರತೀಕಾರದ ಹಿಂಸೆಯಾಗಿ ಕಾಣಿಸುತ್ತದೆ.

ಕೆಲವೊಂದು ಸಂದರ್ಭಗಳಲ್ಲಿ ವ್ಯಕ್ತಿಯು ತಾನು ಹಿಂಸೆಗೆ ಒಳಗಾಗುವ ಸಮಯದಲ್ಲಿ ಅಸಹಾಯಕನಾಗಿದ್ದು ಮುಂದೆ ಸಮರ್ಥನಾಗುವ ಸಂಭವವಿದ್ದಾಗ ತನಗಾದ ಅನ್ಯಾಯಕ್ಕೆ ಪ್ರತಿಯಾಗಿ ಇಂಥದ್ದೇ ಸೇಡನ್ನು ತೀರಿಸಿ ಕೊಳ್ಳುತ್ತೇನೆಂದು ನಿಖರವಾದ ಹಿಂಸೆಯನ್ನು ಪ್ರಕಟಪಡಿಸುವುದು ಪ್ರತಿಜ್ಞಾ ಹಿಂಸೆ ಎನಿಸಿಕೊಳ್ಳುತ್ತದೆ. ಇದಕ್ಕೆ ಉದಾಹರಣೆಯಾಗಿ ದುರ್ಯೋಧನನು ಸಭಾ ಮಧ್ಯದಲ್ಲಿ ದ್ರೌಪದಿಯ ಸೀರೆಯನ್ನು ಸೆಳೆಸಿದ ಸಂದರ್ಭದಲ್ಲಿ ಭೀಮನು ಎದ್ದು ಕೋಪದಿಂದ, 'ದುಶ್ಶಾಸನನ ಎದೆ ಬಗೆದು ರಕ್ತ ಕುಡಿಯುತ್ತೇನೆ, ದುರ್ಯೋಧನನ ತೊಡೆ ಮುರಿದು ಕಿರೀಟವನ್ನು ಒದೆಯುತ್ತೇನೆ' ಎಂದು ಪ್ರತಿಜ್ಞೆ ಮಾಡಿ ಅದರಂತೆ ಹಿಂಸೆ ಮಾಡಿದ್ದನ್ನು ರನ್ನನ ಗದಾಯುದ್ಧದಲ್ಲಿ ಕಾಣುತ್ತೇವೆ.

ಯಾವುದೇ ವ್ಯಕ್ತಿ ಹಣ, ಅಧಿಕಾರ ಮತ್ತು ಅಂತಸ್ಥುಗಳ ದರ್ಪದಿಂದ ಮತ್ತೊಬ್ಬರಿಗೆ ಯಾವುದೇ ಬಗೆಯ ಹಿಂಸೆ ಕೊಡುವುದನ್ನು ಅಧಿಕಾರದ ಹಿಂಸೆ ಎಂದು ಕರೆಯಬಹುದು. ಉದಾಹರಣೆಗೆ ವಡ್ಡಾರಾಧನೆಯ ಗಜಕುಮಾರನ ಕತೆಯಲ್ಲಿ ವಿಷ್ಣು ಎಂಬ ರಾಜನು ತನಗೆ ಯುದ್ಧದಲ್ಲಿ ಸಹಾಯ ಮಾಡಿದ ಗಜಕುಮಾರ ಆಸೆಯನ್ನು ನೆರವೇರಿಸುವುದಕ್ಕಾಗಿ ಮತ್ತೊಬ್ಬನ ಹೆಂಡತಿಯನ್ನು ಬಳಸಿಕೊಳ್ಳುವುದಕ್ಕೆ ಅನುಮತಿ ಕೊಟ್ಟು ಆ ಮತ್ತೊಬ್ಬನ ಮನಸ್ಸಿಗೆ ನೋವುಂಟು ಮಾಡುವುದು ಅಧಿಕಾರದ ಹಿಂಸೆಯಾಗಿ ಕಾಣಿಸುತ್ತದೆ. ಅಂತೆಯೇ ಯಶೋಧರ ಚರಿತೆಯಲ್ಲಿ ಚಂಡಮಾರಿಯ ಆರಾಧಕನಾದ ಮಾರಿದತ್ತನು

ಧಾರ್ಮಿಕ ಆಚರಣೆಗಾಗಿ ತನ್ನ ಅಧಿಕಾರದಿಂದ ಅವಳಿ ಮಕ್ಕಳನ್ನು ತಂದು ಬಲಿಕೊಡುವುದಕ್ಕೆ ತೀರ್ಮಾನಿಸುವುದು ಅಧಿಕಾರದ ಹಿಂಸೆಯಾಗಿಯೇ ಕಾಣಿಸುತ್ತದೆ.

ಯುದ್ಧದ ಸಂದರ್ಭದಲ್ಲಿ ಕ್ಷತ್ರಿಯ ಧರ್ಮದ ನಿಯಮಕ್ಕೆ ವಿರುದ್ಧವಾಗಿ ಮಾಡಿದ ಹಿಂಸೆಗಳನ್ನು ಯುದ್ಧ ಹಿಂಸೆಗಳೆಂದು ಕರೆಯಲಾಗುತ್ತದೆ. ಉದಾಹರಣೆಗೆ ಯುದ್ಧಭೂಮಿಯಲ್ಲಿ ನಿರಾಯುಧನಾಗಿ ಕುಳಿತ ದ್ರೋಣನ ತಲೆಯನ್ನು ಕತ್ತರಿಸುವುದು, ರಥದ ಚಕ್ರವನ್ನು ಮೇಲೆತ್ತಲು ಕೆಳಗಿಳಿದಿದ್ದ ಕರ್ಣನನ್ನು ಕೊಲ್ಲುವುದು, ತಾನಿನ್ನು ಯುದ್ಧ ಮಾಡುವುದಿಲ್ಲವೆಂದು ಸುಮ್ಮನೆ ನಿಂತ ಭೀಷ್ಮನ ಮೇಲೆ ಸಾವಿರಾರು ಬಾಣಗಳನ್ನು ಬಿಟ್ಟು ದೇಹವನ್ನು ಜರ್ಜರಿತಗೊಳಿಸಿದ್ದು... ಮುಂತಾದುವೆಲ್ಲವೂ ಯುದ್ಧ ಹಿಂಸೆಗೆ ನಿದರ್ಶನಗಳಾಗಿ ಕಾಣಿಸುತ್ತವೆ.

ಹೀಗೆ ಬೇರೆ ಬೇರೆ ಕಾರಣಗಳಿಂದ ನಡೆಯುವ ವಿವಿಧ ಬಗೆಯ ಹಿಂಸೆಗಳು ಪ್ರಾಚೀನ ಕನ್ನಡ ಸಾಹಿತ್ಯದುದ್ದಕ್ಕೂ ಕಂಡುಬರುವುದು ವಿಶೇಷವಾಗಿದೆ.

---

**ಆಧಾರ ಗ್ರಂಥಗಳು**

1. ವಡ್ಡಾರಾಧನೆ, ಶಿವಕೋಟ್ಯಾಚಾರ್ಯ, ಅನು: ಕೇಶವಭಟ್ಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 2011
2. ಸಾಹಸ ಭೀಮ ವಿಜಯ, ರನ್ನ, ಅನು: ಆರ್.ವಿ.ಕುಲಕರ್ಣಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 2011
3. ಯಶೋಧರ ಚರಿತೆ, ಜನ್ನ, ಅನು: ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2012
4. ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 2011
5. ಕನ್ನಡ ಕ್ಲಿಷ್ಟಪದಕೋಶ, ಎಲ್.ಎಸ್. ಶೇಷಗಿರಿರಾವ್, ಪಿಸಂ ಬುಕ್ ಹೌಸ, ಬೆಂಗಳೂರು, 2010
6. ಪದಾರ್ಥ ಚಿಂತಾಮಣಿ, ಪಾ.ವೆಂ. ಆಚಾರ್ಯ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು 1998